ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 192-196
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಚಂದ್ರು ಕಾಳೇನಹಳ್ಳಿ ಅವರ 'ಕಲಿವೀರ ಜುಂಜಪ್ಪ' ನಾಟಕದಲ್ಲಿ 'ಗೋವಳಿಗ ಸಂಸ್ಕೃತಿ'

ಆಶಾ ಎನ್[1] ಮತ್ತು ಡಾ. ಷಹಸೀನಾ ಬೇಗಂ[2]
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

***Abstract:***

*ಕಾಡುಗೊಲ್ಲರು ಕರ್ನಾಟಕದ ಪ್ರಧಾನ ಬುಡಕಟ್ಟುಗಳಲ್ಲಿ ಒಂದು. ಇವರು ಮಧ್ಯಕರ್ನಾಟಕದ ಪೂರ್ವಭಾಗದ ಜಿಲ್ಲೆಗಳಾದ ಚಿತ್ರದುರ್ಗ, ತುಮಕೂರು ಹಾಗೂ ಈ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಅತಿದಟ್ಟವಾಗಿ ನೆಲೆಸಿದ್ದಾರೆ. ಆದರೆ ಕಾಡುಗೊಲ್ಲರ ಸಾಂಸ್ಕೃತಿಕ ಕೇಂದ್ರ ಚಿತ್ರದುರ್ಗ ಜಿಲ್ಲೆ. ಪ್ರಸ್ತುತ ಲೇಖನದಲ್ಲಿ ಚಂದ್ರು ಕಾಳೇನಹಳ್ಳಿ ಅವರ 'ಕಲಿವೀರ ಜುಂಜಪ್ಪ' ನಾಟಕದಲ್ಲಿನ 'ಗೋವಳಿಗ ಸಂಸ್ಕೃತಿ'ಯನ್ನು ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ಬುಡಕಟ್ಟು ಸಮುದಾಯ, ಕನ್ನಡ ಸಾಹಿತ್ಯ, ಕನ್ನಡ ನಾಟಕ, ಕಲಿವೀರ ಜುಂಜಪ್ಪ, ಗೋವಳಿಗ ಸಂಸ್ಕೃತಿ.*

## ಪೀಠಿಕೆ

ಕಾಡುಗೊಲ್ಲ ಶಬ್ದ ನಿಷ್ಪತ್ತಿ ನೋಡುವುದಾದರೆ 'ಗೊಲ್ಲ' ಎಂಬ ಶಬ್ದ ಸಂಸ್ಕೃತದ 'ಗೋವಲ' ಶಬ್ದದಿಂದ ಬಂದಿದೆ. ಗೊಲ್ಲರಲ್ಲಿ ಎರಡು ಬಗೆ ಕಾಡುಗೊಲ್ಲರು ಮತ್ತು ಊರುಗೊಲ್ಲರು. ಹೆಸರೆ ಸೂಚಿಸುವಂತೆ 'ಕಾಡು' ಮತ್ತು 'ಊರು' ಅವರ ಮೂಲಗಳನ್ನು ಹೇಳುತ್ತವೆ. ಊರುಗೊಲ್ಲರು, 'ಜಾತಿ'ಯಾದರೆ ಕಾಡುಗೊಲ್ಲರು ಒಂದು 'ಬುಡಕಟ್ಟು'. ಕಾಡುಗೊಲ್ಲರು ಕಾಡುಗಳಲ್ಲಿ ಕಾಡಿನ ಅಂಚುಗಳಲ್ಲಿ 'ಹುಲ್ಲುಗಾವಲು'ಗಳಲ್ಲಿ ಪಶುಪಾಲನೆ ಮಾಡಿಕೊಂಡು ಅಲೆಮಾರಿಗಳಾಗಿ ಎಲ್ಲಿ ಹುಲ್ಲು ನೀರು ಇದೆಯೋ ಅದೇ ನಮ್ಮ ಮನೆಮಾರು ಎಂದು ಬದುಕುತ್ತಿದ್ದರು.

ಅಲಿಖಿತ ಪರಂಪರೆಗೆ ಸೇರಿದ ಕಾಡುಗೊಲ್ಲರು ಜನಪದ ಸಾಹಿತ್ಯದಲ್ಲಿ ಬೆರಗುಗೊಳಿಸುವಂಥ ಸಮೃದ್ಧಿ. ದಕ್ಷಿಣ ಕರ್ನಾಟಕದಲ್ಲಿ ಜನಪದ ಸಂಸ್ಕೃತಿಯನ್ನು ದಟ್ಟವಾಗಿ ಉಳಿಸಿಕೊಂಡು ಬಂದ ಜನಾಂಗಗಳಲ್ಲಿ ಕಾಡುಗೊಲ್ಲರು ಮುಖ್ಯರು. ಮಾನವ ಪಶುಪಾಲನೆಯಿಂದ ಕೃಷಿಯತ್ತ ವಾಲುವ ಸಂಕ್ರಮಣ ಕಾಲವನ್ನು ಜುಂಜಪ್ಪನ ಕಾವ್ಯ ನೈಜವಾಗಿ ಕಟ್ಟಿಕೊಡುತ್ತದೆ. 15–16ನೇ ಶತಮಾನದಲ್ಲಿ ಹುಲ್ಲುಗಾವಲುಗಳ ಅತಿಕ್ರಮಣ ಹಾಗೂ ಪದೇ ಪದೇ ಎದುರಾಗುತ್ತಿದ್ದ ಬರಗಾಲ, ಇದರ ಪರಿಣಾಮ ಪಶುಪಾಲಕರ ನಡುವೆ ನಿರಂತರವಾಗಿ ನಡೆಯುತ್ತಿದ್ದ ಸಂಘರ್ಷಗಳು ಸಾಮಾನ್ಯವಾಗಿತ್ತು. ಇಂತಹ ಸಂಕಷ್ಟಕಾಲದ ಸಂಘರ್ಷವೇ ಜುಂಜಪ್ಪನ ಕಾವ್ಯ. ಅವರ ಜನಪದ ಸಾಹಿತ್ಯದ ತುಂಬ ಪಶುಪಾಲಕ ಸಂಸ್ಕೃತಿಯ ವಿರಾಟ ರೂಪವನ್ನು ನೋಡಬಹುದು. ಗೋವುಗಳ ಸಂರಕ್ಷಣೆ, ಹಾಲು, ಬೆಣ್ಣೆ, ತುಪ್ಪಗಳನ್ನು ಮಾರುವುದು ಒಂದು ಕಾಲಕ್ಕೆ ಈ ಜನಾಂಗದ

***Please cite this article as:*** ಆಶಾ ಎನ್ ಮತ್ತು ಷಹಸೀನಾ ಬೇಗಂ. (2025). ಚಂದ್ರು ಕಾಳೇನಹಳ್ಳಿ ಅವರ 'ಕಲಿವೀರ ಜುಂಜಪ್ಪ' ನಾಟಕದಲ್ಲಿ 'ಗೋವಳಿಗ ಸಂಸ್ಕೃತಿ'. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(3), 192–196

ಮುಖ್ಯ ಕಸುಬಾಗಿತ್ತು. ಪ್ರಸ್ತುತ ವ್ಯವಸಾಯವನ್ನು ಅವಲಂಬಿಸಿದವರೂ, ಜೊತೆಗೆ ಕುರಿಮಂದೆಯನ್ನು ಹೊಂದಿರುವವರನ್ನು ಕಾಣುತ್ತೇವೆ. ಈ ಕಾಡುಗೊಲ್ಲರು ನಾಗರಿಕತೆಯಿಂದ ದೂರವಾದ ಗ್ರಾಮಾಂತರ ಪ್ರದೇಶಗಳಲ್ಲಿ ಗುಡ್ಡಗಾಡುಗಳಲ್ಲಿ ವಾಸಮಾಡುವ ಜನ ಮೂಲಸಂಸ್ಕೃತಿ ಇವರಲ್ಲಿ ನಿಚ್ಚಳವಾಗಿ ಉಳಿದುಬಂದಿದೆ.

ಗೊಲ್ಲರಲ್ಲಿ ಜನಪದ ಸಾಹಿತ್ಯ ಹೇರಳವಾಗಿದೆ. ಇವರಲ್ಲಿ ನೂರಾರು ಈರಗಾರರನ್ನು ಇಬ್ಬರು ಸಾಂಸ್ಕೃತಿಕ ವೀರರನ್ನು ಕಾಣಬಹುದು. ಗೊಲ್ಲರ ಮುಖ್ಯ ಕುಲದೈವಗಳು ಹಲವಾರು ಕಾಟಮಲಿಂಗ, ಚಿತ್ರಲಿಂಗ, ಕ್ಯಾತಾರಲಿಂಗ, ಪಾತೇಲಿಂಗ ಮುಂತಾದವು ಶೈವ ಮೂಲದ ದೈವಗಳು. ರಂಗನಾಥ, ತಿಮ್ಮಪ್ಪ ಕರಿಯಮ್ಮ, ಭೂತಪ್ಪ, ಮಾರಕ್ಕ ಮುಂತಾದವು ಇತರ ದೈವಗಳು. ಇವಲ್ಲದೆ ಇನ್ನೂ ಹಲವಾರು ದೈವಗಳನ್ನು ಆರಾಧಿಸುತ್ತಾರೆ. ತಮ್ಮ ಜನಾಂಗದ ಶರಣರನೇಕರನ್ನು ಇವರು ಪೂಜಿಸುತ್ತಾರೆ. ಗೊಲ್ಲರ ಅತ್ಯಂತ ಜನಪ್ರಿಯ ದೈವಗಳಲ್ಲಿ ಜುಂಜಪ್ಪನೇ ಪ್ರಮುಖನು. ಗೊಲ್ಲ ಸಂಸ್ಕೃತಿಯನ್ನು ರೂಪಿಸಿದ ಮಹಾಪುರುಷರಲ್ಲಿ ಇವನೂ ಒಬ್ಬ ಸಾಂಸ್ಕೃತಿಕ ವೀರ.

ಜುಂಜಪ್ಪನ ಕಾವ್ಯ ಕನ್ನಡ ಜನಪದ ಕಾವ್ಯಗಳ ಸಾಲಿನ ಒಂದು ಅನರ್ಘ್ಯ ರತ್ನ. ಕೇವಲ ಕಾವ್ಯಕ್ಕೆ ಸೀಮಿತವಾಗಿದ್ದ ಈ ಕಥೆಯನ್ನು ನಾಟಕ ರೂಪಕ್ಕೆ ತಂದಿರುವ ನಾಟಕಕಾರರ ಶ್ರಮ ಸಾರ್ಥಕವಾಗಿದೆ. ಕೃತಿಯ ಉದ್ದಕ್ಕೂ ಚಂದ್ರು ಕಾಳೇನಹಳ್ಳಿ ಅವರು ಮೂಲ ಕಥನ ಕಾವ್ಯಕ್ಕೆ ಚ್ಯುತಿಯಾಗದಂತೆ ಬಳಸಿಕೊಂಡಿರುವ ರಂಗತಂತ್ರ ಇಲ್ಲಿ ಕಾಣುತ್ತದೆ. ಕಾಡುಗೊಲ್ಲರ ವೃತ್ತಿ, ಪ್ರವೃತ್ತಿಗಳನ್ನು ಪ್ರತಿಬಿಂಬಿಸುವ ಈ ನಾಟಕ ಜುಂಜಪ್ಪನು ಒಬ್ಬ ಗೋವಳನೇ ಆಗಿದ್ದ ಎಂಬುದನ್ನು ಸಾರುತ್ತದೆ.

ನಾಟಕದಲ್ಲಿ ಜುಂಜಪ್ಪನ ದೀಕ್ಷೆಯನ್ನು ಪಡೆದು ಅವನ ಗಣೆಯನ್ನು ಹೊತ್ತು ಜುಂಜಪ್ಪನ ಗುಣಗಾನ ಮಾಡಿಕೊಂಡು ಊರೂರುಗಳ ಮೇಲೆ ಅವನ ಮಹಿಮೆಯನ್ನು ಹಾಡುತ್ತಾ ಸಾಗುವ 'ಗಣೆಯವರು' ಅಥವಾ 'ಕಾಣಿಕೆಯವರು' ಜುಂಜಪ್ಪನ ಕಾಣಿಕೆ ಎತ್ತುತ್ತ ಪ್ರವೇಶಿಸುತ್ತಾರೆ. ಜುಂಜಪ್ಪನ ಜನನದ ಕುರಿತು ವಿವರಿಸುತ್ತಾರೆ. ಇವನ ವಂಶದ ಹಿರೀಕ ದೇವರ ದಯಮಾರ. ದೇವರ ದಯಮಾರನ ಕುಟುಂಬಕ್ಕೆ ಬಡತನ ಬಂದು ಅವರು ಆಗ ತಾನೇ ಹುಟ್ಟಿದ ತಮ್ಮ ಮಗುವನ್ನು ಸಾಕುವುದಕ್ಕೆ ಸಾಧ್ಯವಿಲ್ಲದೆ, ತನ್ನ ಹೆಂಡತಿಯಾದ ಅಜ್ಜೇರ ಕಂಬಕ್ಕನ ಮುಂಜೆರಗು ಹರಿದು ಜೋಳುಗೆ ಮಾಡಿ, ಹೆಬ್ಬಾಲದ ಮರದ ಬಳ್ಳಿಗೆ ಹಗ್ಗ ಮಾಡಿ ಅದರೊಳಗೆ ತಮ್ಮ ಕೂಸು ಕೆಂಪಿನಮಲೆಗೊಂಡನನ್ನು ಮಲಗಿಸಿ ಹೋದರು. ಅದನ್ನು ಅದೇ ಕೀಕಾರಣ್ಯಕ್ಕೆ ಬಂದಿದ್ದ ಹೊನ್ನಟ್ಟಿ ಹಾಲೇಗೌಡ ನೋಡಿದ ನೀರು ಪಾಲಾಗಬೇಡಿ ಎಂದು ದಂಪತಿಗಳಿಗೆ ಅಂಗಲಾಚಿದ. ದಂಪತಿಗಳಿಬ್ಬರು ಕಪಿಲೆಯ ಪಾಲಾದರು. ಹೆಬ್ಬಾಲದ ಮರ ಜೋಳಿಗೇಲಿ ಜೋತಾಡುತ್ತಿದ್ದ ಕೆಂಪಿನಮಲೆಗೊಂಡನನ್ನು ತಂದು ಬಂಜೆ ಮಡದಿ ಜಾನಕಲ್ ದೊಡ್ಡಕ್ಕಂಗೆ ಕೊಟ್ಟ. ಅವಳು ಅವನನ್ನು ಸಾಕಿ ದೊಡ್ಡೋನು ಮಾಡಿದ್ಲು. ಮಲೆಗೊಂಡ ಇವರ ಮನೆಗೆ ಬಂದ ಕ್ಷಣದಿಂದ ಕಲ್ಲಿನ ಗೊಂತೆಲ್ಲಾ ಚಿನ್ನದ ಗೊಂತಾದವು. ಒಂದು ಕೊಟ್ಟಿಗೆ ದನಗಳೋಗಿ ಏಳು ಗೂಡಿನ ದನಗಳಾದೊ. ಹೀಗೆ ಗಣೆಮೇಳದವರು ಜುಂಜಪ್ಪನ ಐತಿಹ್ಯವನ್ನು ಹೇಳಲು ಆರಂಭಿಸುತ್ತಾರೆ.

ದನಗಾಹಿಯ ಪವಿತ್ರ ವೃತ್ತಿಯನ್ನು ಅವಲಂಬಿಸಿದ್ದ ಜುಂಜಪ್ಪ ಮತ್ತು ಅವನ ಹಿರಿಯರು ಎಂದೂ ಊರುಗಳಲ್ಲಿ ನೆಲೆಸಿ, ರಾಜ್ಯಗಳನ್ನು ಆಳಬೇಕು ಎಂದು ಬಯಸಿದವರಲ್ಲ, ಪಶುಪಾಲನೆಗೋಸ್ಕರ ತಮ್ಮ ಇಡೀ ಬದುಕನ್ನೇ ಧಾರೆ ಎರೆದುಕೊಂಡ ದೇವರ ದಯಮಾರ, ಕೆಂಪನಮಲೆಗೊಂಡ, ಜುಂಜಪ್ಪನವರು ಎಂದೂ ಸಂಸಾರಕ್ಕೆ ಅಂಟಿಕೊಂಡವರಲ್ಲ. ರಾಜ್ಯವನ್ನಾಳುವ ಸಾಮರ್ಥ್ಯವಿದ್ದರೂ ಕಾಡು ಕಾವಲುಗಳಲ್ಲೆ ತಮ್ಮ ಬದುಕನ್ನೆಲ್ಲ ಈ ಕಾರ್ಯಕ್ಕಾಗಿ ಸವೆಸಿದರು. ಅಂಥ ಶ್ರೇಷ್ಠತಮ ಜೀವನದ ಕತೆ ಜುಂಜಪ್ಪನನ್ನು ಕುರಿತ

ಸವಿಸ್ತಾರ ಜನಪದ ಕಾವ್ಯವಾಗಿ ಬೆಳೆದು ಬಂದಿದೆ. ಗೊಲ್ಲಗೌಡರ ಪ್ರಾಚೀನ ಜೀವನ ವಿಧಾನವನ್ನು ವರ್ಣಿಸುವಲ್ಲಿ ಈ ನಾಟಕವು ಅಷ್ಟೇ ವಿಶಿಷ್ಟವಾಗಿದೆ. ಕಾಡು–ಮೇಡುಗಳಲ್ಲಿ ದನದ ಹಿಂಡುಗಳೊಡನೆ ಕಾವಲಿನಿಂದ ಕಾವಲಿಗೆ, ಕಾಡಿನಿಂದ ಕಾಡಿಗೆ ಅಲೆಯುವ ಗೊಲ್ಲಗೌಡರ ಕಷ್ಟಗಳು, ತಮ್ಮ ವೈಯಕ್ತಿಕ ಕ್ಷೇಮವನ್ನು ನಿರ್ಲಕ್ಷಿಸಿದರೂ ತಮ್ಮ ದನಗಳ ಕ್ಷೇಮವನ್ನು ಹಂಬಲಿಸುತ್ತಿದ್ದ ಅವರ ವೃತ್ತಿನಿಷ್ಠೆ ಚಿತ್ರಿತವಾಗಿದೆ. ಯಾವ ಸಂಘರ್ಷಗಳೂ ಇಲ್ಲದ ಪಶುಪಾಲನೆ ನಿರುಮ್ಮಳ ಚಿತ್ರಣ ದೇವರ ದಯಮಾರನ ಭಾಗದಲ್ಲಿ ಕಾಣುತ್ತದೆ. ನಂತರ ಜುಂಜಪ್ಪನ ತಂದೆ ಮಲೆಗೊಂಡನ ಕಾಲಕ್ಕೂ ಹೆಚ್ಚು ವೈರುಧ್ಯಗಳಿಲ್ಲ. ಆದರೆ ಜುಂಜಪ್ಪನ ಕಾಲಕ್ಕೆ ಪಾಳೆಯಪಟ್ಟುಗಳ ಪ್ರಾಬಲ್ಯದಿಂದ ಬಲವಾದ ಪ್ರತಿರೋದ ಕಾಣಿಸಿಕೊಂಡು ಪಶುಪಾಲನೆಯೇ ಒಂದು ಸಾಹಸ ಎಂಬಂತಾಗಿ ಅನೇಕ ಸಂಘರ್ಷ ವೈರುಧ್ಯಗಳ ಚಿತ್ರಣ ಕಾಣುತ್ತೇವೆ.

ಮಲೆಗೊಂಡನ ಮರಣಾನಂತರ ಜುಂಜಪ್ಪ, ಮಾರಣ್ಣ ಮತ್ತು ಮೈಲಣ್ಣ ಮಾವಗಳು (ಕಂಬೇರಗೊಲ್ಲರು) ಕೊಟ್ಟ ಏಳು ಕರುಗಳನ್ನು ಏಳು ಗೋವುಗಳನ್ನು ಕಾದುಕೊಂಡು ಕಾವಲುಗಳಲ್ಲಿಯೇ ಉಳಿದರು. ಜುಂಜಪ್ಪನ ಏಳುಗೂಡಿನ ದನಗಳು ಹದಿನಾಲ್ಕು ಗೂಡಿನ ದನಗಳಾಗಿ ಬೆಳೆದವು. ಕಂಬೇರು ಕೊಟ್ಟ ಕರುಗಳು ಜುಂಜಪ್ಪನ ಕೈಯಲ್ಲಿ ಸಾವಿರಾದವು. ಜುಂಜಪ್ಪ ಅಸಾಮಾನ್ಯ ಪುರುಷನಾಗಿ ಕಾಣಿಸಿಕೊಂಡ. ಹೊಡೆಯಲು ಬಂದರೆ ಹೆದರುವವನಲ್ಲ; ಬಯ್ಯಲು ಬಂದರೆ ಬೆದರುವವನಲ್ಲ! ನೀರಿಗೆ ಹೋಗಿ ದನಗಳಿಗೆ ನೀರು ಕುಡಿಸಬೇಕೆಂದರೆ ಅಲ್ಲೆಲ್ಲ ಅವನ ದನಗಳೇ! ಮೇಯಿಸಲು ಎಲ್ಲಿಗೆ ಹೋದರು ಅವನ ದನಗಳೇ! ಸೋದರ ಮಾವಂದಿರ ಅಸಹನೆ ದಿನದಿಂದ ದಿನಕ್ಕೆ ಹೆಚ್ಚಾಯಿತು. ಇವರು ದನಗಳನ್ನು ಹೆಸರಿಡಿದು ಕರೆಯುವ ರೀತಿಯನ್ನು ಗಮನಿಸಿದರೆ ಅವರು ದನಗಳನ್ನು ಎಷ್ಟು ಪ್ರೀತಿಸುತ್ತಿದ್ದರು ಎಂಬುದರ ಅರಿವಿನೊಂದಿಗೆ ಅವು ಅವರ ಪಾಲಿಗೆ "ಪಶುಗಳಲ್ಲ ಶಿಶುಗಳು" ಎಂಬ ಭಾವನೆ ಮೂಡುತ್ತದೆ ಎಂದು ಮೀರಾಸಾಬಿಹಳ್ಳಿ ಶಿವಣ್ಣನವರು ತಮ್ಮ 'ಕಾಡುಗೊಲ್ಲರ ಕಾವ್ಯಗಳು' ಕೃತಿಯಲ್ಲಿ ಹೇಳಿದ್ದಾರೆ. ಉದಾಹರಣೆಗೆ ಜುಂಜಪ್ಪನ ಮಾವಂದಿರು ಆತನ ಏಳುಗೂಡಿನ ದನಗಳನ್ನು ನಾಶಮಾಡುವ ಸಲುವಾಗಿ ಅವರದ್ದೇ ಆದ ಒಂದು ರೋಗ ಬಡಗರುವನ್ನು ಬಿಟ್ಟು ಇದು ನಮ್ಮದಲ್ಲ ನಿಮ್ಮದೇ ಎಂದು ಉಪಟಳ ಹೇಳುತ್ತಾರೆ. ಆದರೆ ಜುಂಜಪ್ಪ ಪ್ರೀತಿಯಿಂದ ಆ ಬಡಗರುವನ್ನು ಸ್ವೀಕರಿಸಿ, 'ಬಡಮೈಲ' ಎಂದು ಹೆಸರಿಸುತ್ತಾನೆ. ಜುಂಜಪ್ಪ ಆ ಬಡಗರುವಿಗೆ "ಅಪ್ಪಾ, ಬಡಗರು, ಇಂದಿನಿಂದ ನಿನ್ನೆಸರು ಬಡಮೈಲ. ಕೊಂಬಿನಲಿ ಗಂಭೀರ, ಬಾಲದಲಿ ಬಲವಂತ, ಕನ್ನೂಡಿ ಮಕುದೋನೆ, ಸಿರದಲ್ಲಿ ಸಿರಿಯಾಳ, ಭುಜದಲ್ಲಿ ಬುದ್ಧಿವಂತ, ಕಡುಚೆಲುವ ಬಟ್ಟಣ್ಣ ಬಡಮೈಲ ಈ ಪ್ರಪಂಚದಲ್ಲಿ ಹುಟ್ಟುವುದು, ಬೆಳೆಯುವುದು ನೀನು ಹೇಳಬೇಕು ಬಡಮೈಲ. ನಮ್ಮ ಏಳಗೂಡಿನ ದನಕ್ಕೆ ನೀನು ಅಧಿಪತಿಯಾಗಬೇಕು. ನಮ್ಮ ಆವಿನಗೂಡಿನ ಒಂದೊಂದು ಹಸುವಿನ ಕೆಚ್ಚಲಲಿ ಒಂದೊಂದು ಮೊಲೆಯಾಲು ಕುಡಿದು ತಬ್ಬಲಿ ಹೆಬ್ಬುಲಿಯಾಗಬೇಕೆಂದು" ಹೇಳುತ್ತಾ ಬಡಗರುವಾಗಿದ್ದಂತಹ ಬಡಮೈಲನನ್ನ ಬೆಟ್ಟದಷ್ಟು ಬಲಿಷ್ಟನಾಗಿ ಬೆಳೆಸುತ್ತಾನೆ. ನಂತರದಲ್ಲಿ ಬಡಮೈಲನ ರಕ್ಷಣೆಲಿ ಜುಂಜಪ್ಪನ ಏಳುಗೂಡಿನ ದನಗಳು ಸುರಕ್ಷಿತವಾಗಿರುತ್ತವೆ.

ಮನುಷ್ಯ ಮತ್ತು ಪಶುಗಳ ಅವಿನಾಭಾವ ಸಂಬಂಧಕ್ಕೆ ಮತ್ತೊಂದು ಉದಾಹರಣೆಯೆಂದರೆ ಜುಂಜಪ್ಪನ ಮಾವಗಳಾದ ಕಂಬೇರಗೊಲ್ಲರು ಬಡಮೈಲನ್ನು ಅಪಹರಿಸಿ ತಂದರೆ ಜುಂಜಪ್ಪ ಏಳುಗೂಡಿನ ದನಗಳನ್ನು ಸುಲಭವಾಗಿ ಪಡೆಯಬಹುದೆಂಬ ಕಾರಣಕ್ಕೆ ಜುಂಜಪ್ಪನಿಲ್ಲದ ವೇಳೆಯಲ್ಲಿ ಮೈಲಣ್ಣ ಮಾರಣ್ಣರನ್ನು ದಂಡಿಸಿ ಬಡಮೈಲನನ್ನು ಹೊಡೆದುಕೊಂಡು ಹೋಗಲು ಯತ್ನಿಸುತ್ತಾರೆ. ಆಗ ಮೈಲಣ್ಣ ಮಾರಣ್ಣರಿಬ್ಬರು

"ನಮ್ಮನ್ನು ಈ ಚಿತ್ರಹಿಂಸೆಯಿಂದ ತಪ್ಸೊಕ್ಕಾದ್ರೂ ನೀನು ಅವರಿಂದೆ ಹೋಗು" ಎಂದಾಗ ಬಡಮೈಲ ಸುಮ್ಮನೆ ಅವರ ಹಿಂದೆ ನಡೆಯುತ್ತಾನೆ. ಜುಂಜಪ್ಪನ ನಾಟಕದಲ್ಲಿ ಪ್ರಮುಖ ಪಾತ್ರವಹಿಸುವ ಮತ್ತೊಂದು ಹಸುವೆಂದರೆ ಚತುರಂಭೆ. ಚಪ್ಪೋಡು (ದನಗಳನ್ನು ಮೇಯಿಸಲು ಮೀಸಲಿರುವ ಗೋಮಾಳ) ಗಾಗಿ ಸಂಡೂರು ಬೊಮ್ಮಕ್ಕನೊಂದಿಗೆ ಪತ್ತರೆಮರದ ಜೂಜಿಗೆ ಒಪ್ಪಿಗೆ ಸೂಚಿಸುತ್ತಾನೆ. ಪತರೆಮರದ ಜೂಜು ಎಂದರೆ ಸೀಮೆ ದನಗಳನ್ನೆಲ್ಲ ಕರೆಸಿ ಪತ್ತರೆ ಮರದ ಮೇಲೆ ಜೂಜು ಕಟ್ಟೋದು. ಆ ಪತ್ತರೆ ಮರದ ಮೇಲೆ ಹಾರಿದ ದನಗಳ ಒಡೆಯರಿಗೆ ಚಪ್ಪೋಡು, ಕೋಟೆ, ಕೊತ್ತಲ, ಅರಮನೆ ಎಲ್ಲಾ ಬಿಟ್ಟುಕೊಡೋದು ಎಂದು ಪಂಥ ಕಟ್ಟೋದು. ಈ ಪಂಥಕ್ಕೆ ಆಯ್ಕೆಮಾಡಿಕೊಂಡ ಚತುರಂಭೆ ಆಗ್ಲೋ ಈಗ್ಲೋ ಕರ ಹಾಕುವ ಹಸ. ಹಿಂದಿನ ರಾತ್ರಿ ಮಾರಣ್ಣನ ಕನಸಿನಲ್ಲಿ ಚತುರಂಬೆ ಬಂದು ಆ ಪತ್ತರೆಮರಕ್ಕೆ ಪುಣ್ಯ ಆಗಬೇಕು. ಕೇಕೆಯನ್ನು ಕೇಳಿದ ದನಗಳೆಲ್ಲ ತನ್ನ ಹಿಂದೆ ಬರುವಾಗ ಮರದ ನೆತ್ತಿಗೆ ನಾನು ಹಾರ್ತೀನಿ ಕರಾ ಹಿಂದೆ ಬೀಳ್ತದೆ ಅದ್ನ ಮಾರಣ್ಣ ಮೈಲಣ್ಣ ಕೈನಾಗೆ ಆತುಕೋಬೇಕು ಪತ್ತರೆಮರ ಸೂತಕವಾಗಿ ತನ್ನ ಸತ್ಯ ಕಳಕತದೆ ಹನ್ನೆರಡಾಳುದ್ದ ಪತ್ತರೆಮರಾನ ಹಸಾ ಹಾರಿದ್ಹಂಗೆ ಕಾಣ್ತದೆ ಎಂದು ಹೇಳುತ್ತದೆ.

ಪತ್ತರೆಮರದ ಜೂಜಿಗೆ ಎಲ್ಲ ಸಿದ್ಧತೆಯಾಗುತ್ತದೆ ಚತುರಂಭೆ ಎಡಭಾಗದಿಂದ ಓಡಿ ಬರುತ್ತದೆ. ಪತ್ತರೆಮರ ಕುಬ್ಜವಾಗುವುದು ಅದನ್ನು ಹಾರಿ ಹೋಗುವಾಗ ಚತುರಂಭೆ ಕರಹಾಕುವುದು, ಕರುವಿನ ಎಡಗಡೆ ನಿಂತಿರೋ ಮಾರಣ್ಣ, ಮೈಲಾರಣ್ಣ ಕೈ ಸೇರುವುದು. ಬಲಭಾಗಕ್ಕೆ ನೆಗೆದ ಚತುರಂಭೆ ಕೆಳಗೆ ಬೀಳುವುದು. ಅತ್ತ ಕರು, ಇತ್ತ ಹಸು ಎರೆಡೂ ಸಾಯುತ್ತವೆ. ಹಸು ಸತ್ತಿರುವ ಕಡೆ ಜುಂಜಪ್ಪ ಕರು ಸತ್ತು ಬಿದ್ದಿರುವ ಕಡೆ ಮಾರಣ್ಣ ಮೈಲಣ್ಣ ದುಃಖಿಸುತ್ತಾರೆ. ಹೀಗೆ ಚತುರಂಭೆ ತನ್ನ ಸಾವಿನ ಮೂಲಕ ಸಾರ್ಥಕತೆ ಮೆರೆದು ಪುಣ್ಯಕೋಟಿಯ ವಂಶ ಸೇರುತ್ತಾಳೆ. ಎಲ್.ಕೆ. ಅನಂತಕೃಷ್ಣ ಅಯ್ಯರ್ ಹೇಳುವಂತೆ 'ಕಾಡುಗೊಲ್ಲರ ಪ್ರಧಾನ ದೈವವಾದ ಜುಂಜಪ್ಪ ದೈವೀಕರಣಗೊಂಡ ಪಶುಪಾಲಕ'ನಂತೆ ಕಂಡುಬರುತ್ತಾನೆ.

ಈ ಬುಡಕಟ್ಟು ನಡೆದು ಬಂದ ಕಥೆಯನ್ನು ಗರ್ಭೀಕರಿಸಿಕೊಂಡಿರುವ ಕಾಡುಗೊಲ್ಲರ ಜನಪದ ಸಾಹಿತ್ಯ ಇಂದು ಕಾಣೆಯಾಗಿರುವ ಪಶುಪಾಲಕ ಸಂಸ್ಕೃತಿಯ ಪಳೆಯುಳಿಕೆಯಂತಿದೆ. ಭಾರತದಲ್ಲಿ ಗೋವಿಗಿರುವ ಪರಮಪೂಜ್ಯಸ್ಥಾನ ಪ್ರಪಂಚದ ಬೇರಾವ ದೇಶಗಳಲ್ಲೂ ಇಲ್ಲ. ಈ ದೇಶದಲ್ಲಿ ಗೋವನ್ನು ಕೇಳಿದ್ದು ಕೊಡುವ 'ಕಾಮಧೇನು' ಎಂದು ಭಾವಿಸಲಾಗಿದೆ. ಗೋವಿನಲ್ಲಿ ಮುಕ್ಕೋಟಿ ದೇವತೆಗಳು ನೆಲೆಸಿದ್ದಾರೆ ಎಂಬ ನಂಬಿಕೆ ಇದೆ. ಗೋವುಗಳು ಪ್ರತಿಷ್ಠೆಯ ಮತ್ತು ಮರ್ಯಾದೆಯ ಸಂಕೇತವಾಗಿತ್ತು. ಹಿಂದೆ ಪ್ರತಿ ಹಳ್ಳಿಯಲ್ಲಿ ದನಗಳು ಮೇಯಲು ನೂರಾರು ಎಕರೆ ಗೋಮಾಳಗಳನ್ನು ಮೀಸಲಿಡುತ್ತಿದ್ದರು. ಇಂದು ಆ ಗೋಮಾಳಗಳನ್ನು ವ್ಯವಸಾಯಕ್ಕೆ ಬಳಕೆ ಮಾಡಿಕೊಳ್ಳಲಾಗಿದೆ ಯಾಂತ್ರೀಕೃತ ಬೇಸಾಯ ಪದ್ಧತಿಯಿಂದಾಗಿ ದನಕರುಗಳ ಸಂಖ್ಯೆಯೂ ವಿರಳವಾಗುತ್ತಿದೆ. ಹಿಂದೆ ಗೋಪಾಲನೆ ಮಾಡುತ್ತಿದ್ದ ಬುಡಕಟ್ಟುಗಳು ಇಂದು ಕುರಿ ಸಾಕಾಣೆಯಲ್ಲಿ ತೊಡಗಿವೆ.

ಹಿಂದೆ ಗೋವನ್ನು 'ಗೋಧನ' ಎಂದೇ ಕರೆಯುತ್ತಿದ್ದರು. ಗೋಪಾಲಕರಾದ ಆರ್ಯರು ಕೃಷಿಕರಾದ ದ್ರಾವಿಡರಿಗೆ ಗೋವು ಸಾಕಾಣೆ ಅನಿವಾರ್ಯವಾಗಿತ್ತು. ಹೀಗಾಗಿ ಗೋವನ್ನು ಪಾಲಿಸುವುದು, ರಕ್ಷಿಸುವುದು ಸಮಾಜದ ಮೌಲ್ಯಗಳಾಗಿ ಬೆಳೆದವು. ಅಂದಿನ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುತ್ತಿದ್ದುದೇ ಅವರು ಹೊಂದಿರುವ ಗೋವುಗಳ ಸಂಖ್ಯೆಯಿಂದ. ಒಂದು ಕಾಲಕ್ಕೆ ಮಹೋನ್ನತ ಸಂಸ್ಕೃತಿಯ ಪ್ರತೀಕವಾಗಿದ್ದ ಪಶುಪಾಲನೆ ಕೊನೆಯ ದಿನಗಳ ಚಿತ್ರಣ ನೀಡುವ ದೃಷ್ಟಿಯಿಂದ 'ಕಲಿವೀರ ಜುಂಜಪ್ಪ'ನ ನಾಟಕಕ್ಕೆ ವಿಶಿಷ್ಟವಾದ ಸ್ಥಾನವಿದೆ.

**ಆಕರ ಗ್ರಂಥ**


- ಚಂದ್ರು ಕಾಳೇನಹಳ್ಳಿ. (2017). *ಚಂದ್ರು ಕಾಳೇನಹಳ್ಳಿ ಅವರ ಆರು ನಾಟಕಗಳು.* ಸಿರಿವರ ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಮೀರಾಸಾಬಿಹಳ್ಳಿ ಶಿವಣ್ಣ. (2009). *ಕಾಡುಗೊಲ್ಲರ ಕಾವ್ಯಗಳು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಪರಮಶಿವಯ್ಯ, ಜೀ.ಶಂ. (2016). ದಕ್ಷಿಣ ಕರ್ನಾಟಕದ ಜನಪದಕಾವ್ಯ ಪ್ರಕಾರಗಳು. ಅಭಿನವ ಪ್ರಕಾಶನ.